## ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.

**ದಿಃ17-02-2026**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಜೆ ವಕೀಲರಿಂದಃ**

ನಾನು 10 ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಇಂಗ್ಲೀಷ ಬರುವುದಿಲ್ಲ. ಆರೋಪಿಗೆ ಕಳುಹಿಸಿದ ನೋಟೀಸ ನಲ್ಲಿನ ಮಾಹಿತಿಗಳನ್ನು ನಾನೇ ನೀಡಿರುತ್ತೇನೆ. ಆರೋಪಿಯ ಮೈಸೂರಿನಲ್ಲಿರುವ ಮನೆಯನ್ನು ನನಗೆ ನೀಡುತ್ತೇನೆಂದು ಹೇಳಿದ್ದು ಆ ಮೂಲಕ ನನಗೆ ಒಬ್ಬರು ಪರಿಚಯ ಮಾಡಿಸಿರುತ್ತಾರೆ. ನನ್ನ ಸ್ನೇಹಿತರ ಮೂಲಕ ಆರೋಪಿ ಪರಿಚಯವಾಗಿರುತ್ತಾರೆ. ನನ್ನ ಸ್ನೇಹಿತ ರಿಯಲ್ ಎಸ್ಟೇಟ್ ವ್ಯವಹಾರ ಮಾಡುವುದಿಲ್ಲ. ಆರೋಪಿಯ ವಿಳಾಸವನ್ನು ನನ್ನ ಸ್ನೇಹಿತ ನೀಡಿರುತ್ತಾರೆ. ನನ್ನ ಹೆಂಡತಿ ಆರೋಗ್ಯ ಸರಿಯಿಲ್ಲದ ಕಾರಣ ಅವರ ಚಿಕಿತ್ಸೆಗಾಗಿ ಮೈಸೂರಿನಲ್ಲಿ ಉಳಿಯುವ ಉದ್ದೇಶದಿಂದ ಮನೆ ಹುಡುಕುತ್ತಿದ್ದೇವು. ನನ್ನ ಸ್ನೇಹಿತ ಮೈಸೂರಿನಲ್ಲಿ ಮೆಡಿಕಲ್ ಸ್ಟೋರ್ ಇರುವುದರಿಂದ ಅವರಿಗೆ ಯಾರೋ ಒಬ್ಬರು ಮನೆ ಇರುವ ಬಗ್ಗೆ ತಿಳಿಸಿದ್ದು, ಅದನ್ನು ನನಗೆ ತಿಳಿಸಿರುತ್ತಾರೆ. ನನ್ನ ಸ್ನೇಹಿತನ ಹೆಸರು ಶೇಖರ ಎಂದು ಇರುತ್ತದೆ. ಸದರಿ ವಿಚಾರವನ್ನು ನನ್ನ ನೋಟೀಸನಲ್ಲಿ ಅಥವಾ ದೂರಿನಲ್ಲಿ ತಿಳಿಸಿರುವುದಿಲ್ಲ.

ಆರೋಪಿ ಮನೆ ಭೋಗ್ಯಕ್ಕೆ ಇರುವುದಾಗಿ ನನಗೆ ತಿಳಿಸಿರುತ್ತಾರೆ. ಆನಂತರ ನಾನು ವಿಳಾಸ ಪಡೆದು ಆರೋಪಿಯ ಮನೆಯ ಹತ್ತಿರ ಹೋಗಿರುತ್ತೇನೆ. ಆ ಸಮಯದಲ್ಲಿ ನಾನು ಮತ್ತು ನನ್ನ ಹೆಂಡತಿ ಇದ್ದೇವು. ನನ್ನ ಸ್ನೇಹಿತ ಬಂದಿರುವುದಿಲ್ಲ. ಆರೋಪಿಗೆ ಮೈಸೂರಿನಲ್ಲಿ ಅರಸು ರಸ್ತೆಯಲ್ಲಿ ಒಂದು ಮಳಿಗೆ ಸಹ ಇದ್ದು ಅದರ ವಿಳಾಸ ವನ್ನು ನೀಡಿರುತ್ತಾರೆ. ನಾನು ಅಲ್ಲಿಗೂ ಸಹ ಹೋಗಿರುತ್ತೇನೆ. ನನ್ನ ಸ್ನೇಹಿತನಿಗೆ ಆರೋಪಿ ಪರಿಚಯವಿರುವುದಿಲ್ಲ. ಆದರೆ ಅವರ ಅಂಗಡಿಗೆ ಬರುವ ಗ್ರಾಹಕರು ಆರೋಪಿ ಮನೆ ಬೋಗ್ಯಕ್ಕೆ ಇರುವುದಾಗಿ ಅವರಿಗೆ ತಿಳಿಸಿರುತ್ತಾರೆ. ನನ್ನ ಸ್ನೇಹಿತ ಯಾವುದೇ ವಿಳಾಸ ನೀಡಿಲ್ಲ ಮತ್ತು ನಾನು ಆರೋಪಿ ಮನೆ ಬಳಿ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಅಂಗಡಿಗೆ ಹೋದಾಗ ಆರೋಪಿ ಇದ್ದರು. ಆರೋಪಿಯನ್ನು ವಿಚಾರಿಸಿದಾಗ ರಾಮಸ್ವಾಮಿ ಸರ್ಕಲ್ ಬಳಿ ಅವರ ಮನೆ ಇರುವುದಾಗಿ ನಮ್ಮನ್ನು ಕರೆದುಕೊಂಡು ಹೋಗಿರುತ್ತಾರೆ.

ಆರೋಪಿಗೆ 3 ಮಹಡಿ ಮನೆ ಇದ್ದು, 3 ನೇ ಮಹಡಿಯಲ್ಲಿ ಅವರು ವಾಸವಿರುತ್ತಾರೆ. ಆಗಸ್ಟ - ಸೆಪ್ಟೆಂಬರ್ 2023 ರಲ್ಲಿ ನಾನು ಹೋಗಿರುತ್ತೇನೆ. ಆ ಸಮಯದಲ್ಲಿ ನಾನು ಆರೋಪಿ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸೆಪ್ಟೆಂಬರ್ ನಲ್ಲಿ 2-3 ಬಾರಿ ಮನೆಯ ಬಗ್ಗೆ ಮಾತನಾಡಲು ಹೋಗಿರುತ್ತೇನೆ. ಆ ಸಮಯದಲ್ಲಿ ನಾನು ಯಾವುದೇ

ಮಾತುಕತೆ ಮಾಡಿಲ್ಲ, ಆರೋಪಿ ಮನೆಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಮನೆ ಭೋಗ್ಯವನ್ನು ಖಾಲಿ ಮಾಡಿಸಿ ನನಗೆ ಬೋಗ್ಯಕ್ಕೆ ಕೊಡುವುದಾಗಿ ಮಾತುಕತೆ ಮಾಡಿರುತ್ತಾರೆ. ನನಗೆ 3 ವರ್ಷಕ್ಕೆ ಭೋಗ್ಯಕ್ಕೆ ಮನೆ ಕೊಡುವುದಾಗಿ ಆರೋಪಿ ತಿಳಿಸಿರುತ್ತಾರೆ. ನೆಲ ಮಹಡಿಯಲ್ಲಿ ಅಂಗಡಿ ಮಳಿಗೆ ಗಳು ಇವೆ. 1 ಮತ್ತು 2 ನೇ ಮಹಡಿಯನ್ನು ಭೋಗ್ಯಕ್ಕೆ ನೀಡಿರುತ್ತಾರೆ. ಸದರಿ ಮನೆ ಆರೋಪಿಯದ್ದೆ ಎಂದು ತಿಳಿಸಿರುತ್ತಾರೆ. ನಾನು ದಾಖಲಾತಿಗಳನ್ನು ನೋಡಿರುತ್ತೇನೆ ಮತ್ತು ನೆಲಮಹಡಿ ಅಂಗಡಿಯವರು ಆರೋಪಿಯದ್ದೆ ಮನೆ ಎಂದು ತಿಳಿಸಿರುತ್ತಾರೆ. ದಾಖಲಾತಿಗಳು ಆರೋಪಿ ಹೆಸರಿನಲ್ಲಿ ಇದ್ದವು. ಆರೋಪಿ ಯಾವುದೇ ದಾಖಲಾತಿ ತೋರಿಸಿಲ್ಲ ಎಂದರೆ ಸರಿಯಲ್ಲ.

ಮನೆ ಖಾಲಿ ಮಾಡಿಸಿ ಆನಂತರ ಭೋಗ್ಯ ಪತ್ರ ಮಾಡಿಸುವುದಾಗಿ ತಿಳಿಸಿ ಆರೋಪಿ ಒಂದು ಕರಡು ಪ್ರತಿಯನ್ನು ನನಗೆ ವ್ಯಾಟ್ಸ ಆಫ್ ಮೂಲಕ ಕಳುಹಿಸಿರುತ್ತಾರೆ. ಅದನ್ನು ನ್ಯಾಯಾಲಯಕ್ಕೆ ನೀಡಿರುತ್ತೇನೆ. ಆರೋಪಿ ಯಾವುದೇ ಕರಡು ಪ್ರತಿಯನ್ನು ನನಗೆ ಕಳುಹಿಸಿಲ್ಲ ಮತ್ತು ನನ್ನ ಮತ್ತು ಆರೋಪಿ ನಡುವೆ ಯಾವುದೇ ಮಾತುಕತೆಯಾಗಿಲ್ಲ ಎಂದರೆ ಸರಿಯಲ್ಲ. ಭೋಗ್ಯ 20 ಲಕ್ಷ ಎಂದು ಹೇಳಿದರು. ಆನಂತರ ನಾವು ಮಾತನಾಡಿದ ನಂತರ ರೂ 16,50,000/- ಕ್ಕೆ ತೀರ್ಮಾನಿಸಿರುತ್ತಾರೆ. ಸದರಿ ಮಾತುಕತೆ ಸೆಪ್ಟೆಂಬರ್ 15-20 ರ ತಾರೀಖಿನ ಒಳಗೆ ಮಾಡಿರುತ್ತಾರೆ. ಆ ರೀತಿ ಯಾವುದೇ ಮಾತುಕತೆ ಮಾಡಿಲ್ಲ ಎಂದರೆ ಸರಿಯಲ್ಲ. ಭೋಗ್ಯ ಖಾಲಿ ಮಾಡಿಸಿದ ನಂತರ ನಮಗೆ ಮನೆ ನೀಡಿ ಆನಂತರ ಮನೆಗೆ ಲಿಫ್ಟ ಮಾಡಿಸುವುದಾಗಿ ಆರೋಪಿ ನನಗೆ ತಿಳಿಸಿರುತ್ತಾರೆ. ನಮ್ಮ ಅತ್ತೆ ಸಹ ನಮ್ಮ ಜೊತೆ ಇರುತ್ತಾರೆ. ನಾವು ಮನೆಗೆ ಹೋದ ನಂತರ ಲಿಫ್ಟ್ ಹಾಕಿಸುವುದಾಗಿ ತಿಳಿಸಿದರು. ಸದರಿ ವಿಚಾರವನ್ನು ನನ್ನ ನೋಟೀಸ ನಲ್ಲಿ ಅಥವಾ ದೂರಿನಲ್ಲಿ ತಿಳಿಸಲು ತೊಂದರೆ ಇರಲಿಲ್ಲ.

ನನ್ನ ಹೆಂಡತಿಯನ್ನು ಭಾರತ್ ಕ್ಯಾನ್ಸರ್ ಆಸ್ಪತ್ರೆಗೆ ತೋರಿಸುತ್ತಿದ್ದೇವು. ಆರೋಪಿ ಭೋಗ್ಯ ಕರಡು ಪ್ರತಿಯನ್ನು ಯಾವ ದಿನಾಂಕದಂದು ಕಳುಹಿಸಿರುತ್ತಾರೆಂದು ನೆನಪಿಲ್ಲ. ಮನೆ ಭೋಗ್ಯಕ್ಕಾಗಿ ನಾನು ಆರೋಪಿಗೆ ನಗದಾಗಿ ರೂ6,50,000/- ಹಣ ನೀಡಿರುತ್ತೇನೆ. ನಿಹಾರ್ ರವರ ಹೆಸರಿಗೆ 5 ಲಕ್ಷದ ಚೆಕ್ ನೀಡಿರುತ್ತೇನೆ. ಆರೋಪಿ ಮತ್ತು ಅವರ ಮಗ ನಿಹಾರ್ ಒಟ್ಟಾಗಿ ಬಂದಿದ್ದರು. ನಾನು ಆರೋಪಿ ಮತ್ತು ಅವರ ಮಗನಿಗೆ 11,50,000/- ಹಣ ನೀಡಿರುತ್ತೇನೆ. ನಿಹಾರ್ ರವರಿಗೆ 5 ಲಕ್ಷ ಚೆಕ್ ನ್ನು ದಿನಾಂಕ ನಮೂದು ಮಾಡಿ ನೀಡಿರುವುದಿಲ್ಲ. ಅವರೇ ಹಾಕಿಕೊಳ್ಳುವುದಾಗಿ ತಿಳಿಸಿರುತ್ತಾರೆ. ಉಳಿಕೆ ಹಣವನ್ನು ಆರೋಪಿ ಭೋಗ್ಯದಾರರನ್ನು ಖಾಲಿ ಮಾಡಿಸಿ ನಮಗೆ ಮನೆ ನೀಡಿದ ನಂತರ ಹಣ ನೀಡುವುದಾಗಿ ಮಾತುಕತೆಯಾಗಿತ್ತು. ಆರೋಪಿ 02.10.2023 ರಂದು ನಮ್ಮ ತೋಟಕ್ಕೆ ಬೆ 11 ರ

ಸಮಯದಲ್ಲಿ ಬಂದು ಹಣ ಪಡೆದಿರುತ್ತಾರೆ. ಆನಂತರ ಅಕ್ಟೋಬರ್ ಮೊದಲ ವಾರದಲ್ಲಿ ನಾನು ಪುನಃ ಆರೋಪಿ ಮನೆಗೆ ಹೋಗಿರುತ್ತೇನೆ. ಮನೆ ಖಾಲಿ ಮಾಡಿಸಿಕೊಡಿ ನಾವು ಬರುತ್ತೇವೆಂದು ತಿಳಿಸಿರುತ್ತೇವೆ. ಆಗ ಆರೋಪಿ ಭೋಗ್ಯದಾರರಿಗೆ ನಾನು ನೀಡಿದ ಹಣ ನೀಡಿದ್ದು, ಒಂದು ವಾರದಲ್ಲಿ ಅವರು ಬೇರೆ ಮನೆಗೆ ಹೋಗುತ್ತಾರೆ ಆನಂತರ ಮನೆ ನೀಡುವುದಾಗಿ ತಿಳಿಸಿದರು. ನಾನು ಆರೋಪಿ ಮನೆಗೆ ಹೋಗಿಲ್ಲ ಮತ್ತು ಯಾವುದೇ ಹಣಕಾಸಿನ ವ್ಯವಹಾರವಾಗಿಲ್ಲ ಎಂದರೆ ಸರಿಯಲ್ಲ.

ನಾನು 11,50,000/- ಲಕ್ಷ ಹಣ ನೀಡಿದ ನಂತರ ಭೋಗ್ಯ ಪತ್ರ ಮಾಡಿಕೊಡಿ ಎಂದು ಕೇಳಿರುತ್ತೇನೆ. ಆಗ ಅವರು ನಾವು ಮನೆಗೆ ಬಂದ ನಂತರ ಮಾಡಿಸಿಕೊಡುವುದಾಗಿ ತಿಳಿಸಿದರು. ಆನಂತರವು ಹೋಗಿ ಕೇಳಿದಾಗ ಇನ್ನೂ ಖಾಲಿ ಮಾಡಿಸಿರಲಿಲ್ಲ ಮತ್ತು ನಾನು ಖಾಲಿ ಮಾಡಿಸಿಕೊಡಿ ಎಂದು ಕೇಳಿರುತ್ತೇನೆ. ಆರೋಪಿ ಭೋಗ್ಯದಾರರಿಗೆ ಪೂರ್ಣ ಹಣ ನೀಡಿದೆ ಇದುದ್ದರಿಂದ ಅವರು ಮನೆ ಖಾಲಿ ಮಾಡಿಕೊಟ್ಟಿರುವುದಿಲ್ಲ. ಆನಂತರ ಅವರು ಮನೆ ಖಾಲಿ ಮಾಡದೇ ನನಗೆ ಮೋಸ ಮಾಡಿರುತ್ತಾರೆ. ಆರೋಪಿ ನನಗೆ ಹಣ ವಾಪಸ್ಸು ನೀಡಿಲ್ಲ. ನಾನು ಯಾವುದೇ ಹಣವನ್ನು ಆರೋಪಿಗೆ ನೀಡದೇ ಇರುವುದರಿಂದ ನಾನು ವಾಪಸ್ಸು ಹಣ ಪಡೆಯುವ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮಗ ನಿಹಾರ್ ರವರು ನನಗೆ ದಿಃ 18.10.2023 ರಂದು 10 ಸಾವಿರ ಹಣ ಫೋನ್ ಫೇ ಮೂಲಕ ಹಾಕಿರುತ್ತಾರೆಂದರೆ ಸರಿ. ಕಾಗದಗಳನ್ನು ತಯಾರಿಸಲು ಹಣ ಹಾಕಿರುತ್ತಾರೆ.

ಮನೆ ಖಾಲಿ ಮಾಡಿಕೊಡಿ ಇಲ್ಲವೇ ಹಣ ವಾಪಸ್ಸು ಕೊಡಿ ಎಂದು ಕೇಳಿದಾಗ ಆರೋಪಿ ನಿ ಪಿ 1 ಚೆಕ್ ನ್ನು ನೀಡಿರುತ್ತಾರೆ. ಚೆಕ್ ನೀಡಿದ ದಿನಾಂಕ ನೆನಪಿಲ್ಲ. ಅವರು ಚೆಕ್ ನೀಡಿ ಸ್ವಲ್ಪ ಸಮಯ ಕೇಳಿದರು ಆನಂತರ ಅವರು ಹೇಳಿದ ದಿನಾಂಕ ನಮೂದು ಮಾಡಲು ತಿಳಿಸಿರುತ್ತಾರೆ. ಆರೋಪಿ ಡಿಸೆಂಬರ್ ತಿಂಗಳಲ್ಲಿ ಚೆಕ್ ನೀಡಿರುತ್ತಾರೆ ದಿನಾಂಕ ನೆನಪಿಲ್ಲ. ನಿ ಪಿ 1 ಚೆಕ್ ನ್ನು ಜನವರಿ ತಿಂಗಳಲ್ಲಿ ನಾನು ಬ್ಯಾಂಕ್ ಗೆ ಹಾಕಿರುತ್ತೇನೆ. ಆರೋಪಿಗೆ ನಾನು ಕರೆ ಮಾಡಿ ಅವರು ಹೇಳಿದ ನಂತರವೇ ನಾನು ಬ್ಯಾಂಕ್ ಗೆ ಚೆಕ್ ನ್ನು ಹಾಕಿರುತ್ತೇನೆ. 6,50,000/- ಲಕ್ಷ ಹಣಕ್ಕೆ ಚೆಕ್ ನೀಡಿರುತ್ತಾರೆ. ಮನೆ ಭೋಗ್ಯಕ್ಕೆ ಸಾಕಷ್ಟು ಬಾರಿ ಕೇಳಿದರು ಆರೋಪಿ ಮತ್ತು ಅವರ ಮಗ ತಪ್ಪಿಸಿಕೊಳ್ಳುತ್ತಿದ್ದರು. ಆನಂತರ ಅವರ ಅಂಗಡಿಯಲ್ಲಿ ಹಣ ವಾಪಸ್ಸು ಕೊಡುತ್ತೇನೆಂದು ಹೇಳಿ ಚೆಕ್ ನೀಡಿರುತ್ತಾರೆ. ಯಾವುದೇ ಮಾತುಕತೆಯಾಗದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನಿ ಪಿ 1 ಚೆಕ್ ನಲ್ಲಿ ಬರವಣಿಗೆ ವ್ಯತ್ಯಾಸ ಇರುತ್ತದೆ ಎಂದರೆ ಸರಿಯಲ್ಲ. ನಿ ಪಿ 1 ರಲ್ಲಿ ಬರೆದಿರುವ ಶಾಯಿ ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ನಿ ಪಿ 1 ರಲ್ಲಿ ಚೆಕ್ ನ್ನು ನಾನು ಬರೆದಿರುತ್ತೇನೆ. ಆರೋಪಿ ಹೇಳಿದ ದಿನಾಂಕವನ್ನು ನಾನು ಬರೆದಿರುತ್ತೇನೆ. 2 ಲಕ್ಷ ಮೇಲ್ಪಟ್ಟು ಹಣ ಬ್ಯಾಂಕ್ ಮೂಲಕ ವ್ಯವಹರಿಸಬೇಕು ಎಂದರೆ ನಮ್ಮ ತೋಟದ ಹಣ ನಗದಾಗಿ ನೀಡಿರುತ್ತಾರೆಂದು ನುಡಿಯುತ್ತಾರೆ. ನೋಟೀಸ್ ಆರೋಪಿಗೆ ಯಾವಾಗ ತಲುಪಿರುತ್ತದೆ ಎಂದು ನೆನಪಿಲ್ಲ. ಆದರೆ ತಲುಪಿರುತ್ತದೆ. ನಾನು ಆರೋಪಿಗೆ ಯಾವುದೇ ಹಣ ನೀಡಿದೇ ಇದ್ದರೂ ಸುಳ್ಳು ಕೇಸನ್ನು ದಾಖಲು ಮಾಡಿರುತ್ತೇನೆಂದರೆ ಸರಿಯಲ್ಲ. ನಿಹಾರ್ ಹೆಸರಿಗೆ ನಾನು ಹಣ ನೀಡಿದ್ದು ಅದನ್ನು ನಾನು ಹಂತ ಹಂತವಾಗಿ ನಗದು ರೂಪದಲ್ಲಿ ವಾಪಸ್ಸು ಪಡೆದಿದ್ದರೂ ಸಹ ಈ ಸುಳ್ಳು ಕೇಸನ್ನು ಹಾಕಿರುತ್ತೇನೆಂದರೆ ಸರಿಯಲ್ಲ. ನಾನು ಬೋಗ್ಯಕ್ಕಾಗಿ ಹಣ ನೀಡಿರುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ಪ್ರಕರಣದ ನನ್ನ ನೋಟೀಸ್ ನಲ್ಲಿ ನಿಹಾರ್ ಗೆ ಚೆಕ್ ನೀಡಿರುವ ಬಗ್ಗೆ ಹೇಳಿರುವುದಿಲ್ಲ. ಈ ಪ್ರಕರಣದಲ್ಲಿ ಹೇಳುವ ಅವಶ್ಯಕತೆ ಇರದೇ ಇರುವುದರಿಂದ ತಿಳಿಸಿರುವುದಿಲ್ಲ. ನನ್ನ ಬಳಿ ಸಾಕಷ್ಟು ಹಣ ಇತ್ತು ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿರುವುದಿಲ್ಲ. ನಮಗೆ ನಗದು ರೂಪದಲ್ಲಿ ಹಣ ನೀಡಿ ಮೆಣಸನ್ನು ತೆಗೆದುಕೊಂಡು ಹೋಗುವುದರಿಂದ ದಾಖಲಾತಿ ಇಡಲು ಆಗುವುದಿಲ್ಲ. ಮಧು ಎಂಬ ವ್ಯಾಪಾರಿ ಬಂದು ಮೆಣಸು ಖರೀದಿ ಮಾಡಿರುತ್ತಾರೆ. ಸದರಿ ವಿಚಾರವನ್ನು ಈ ಪ್ರಕರಣದಲ್ಲಿ ತಿಳಿಸಿರುವುದಿಲ್ಲ. ನಾನು ಯಾವುದೇ ಮೆಣಸು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ವಿಚಾರವನ್ನು ಆದಾಯ ತೆರಿಗೆಯಲ್ಲಿ ತೋರಿಸಿರುವುದಿಲ್ಲ. ಸುಳ್ಳು ಕೇಸ ದಾಖಲಿಸಿ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**